ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 18.02.2025.

**ಪಾಟೀ ಸವಾಲುಃ** ಪ್ರತಿವಾದಿ ಪರ ಶ್ರೀ ಜಿ.ಬಿ.ಕೆ. ವಕೀಲರಿಂದಃ

ನನ್ನ ತಂದೆ ಹನಮಂತರಾಯ ರವರ ಮೊದಲನೆ ಹೆಂಡತಿ ಹೆಸರು ಹೀರಾಬಾಯಿ ಇರುತ್ತದೆ, ಅವರು ತಿರಿಕೊಂಡು ಸುಮಾರು 52 ವರ್ಷವಾಗಿದೆ ಎಂದರೆ, ಸಾಕ್ಷಿ ಅದಕ್ಕೂ ಹೆಚ್ಚಿಗೆ ಆಗಿದೆ ಎಂದು ನುಡಿಯುತ್ತಾರೆ. ಹೀರಾಬಾಯಿ ತಿರಿಕೊಂಡಾಗ 4ನೇ ಪ್ರತಿವಾದಿ 4 ವರ್ಷದವರು ಇದ್ದರು ಎಂದರೆ ಸರಿ. ಆತ 3-4 ವರ್ಷ ಇದ್ದಾಗ ಆತನ ಸೋದರ ಮಾವನ ಮನೆಯಲ್ಲಿಯೇ ಜೋಪಾನವಾಗಿರುತ್ತಾನೆ ಎಂದರೆ ಸರಿಯಲ್ಲ. ನನ್ನ ತಂದೆ ತಿರಿಕೊಂಡು ಸುಮಾರು 4-5 ವರ್ಷವಾಗಿರುತ್ತದೆ. ನನ್ನ ತಾಯಿ ಅಂದರೆ 1ನೇ ಪ್ರತಿವಾದಿ ಮುರಮ ಗ್ರಾಮ ಇರುತ್ತದೆ. 1ನೇ ಪ್ರತಿವಾದಿಗೆ ನನ್ನ ತಂದೆ ಹನಮಂತರಾಯ 3ನೇ ಗಂಡ ಇರುತ್ತಾನೆ ಎಂದರೆ ಸರಿಯಲ್ಲ. ನನ್ನ ಮದುವೆ 2017ರಲ್ಲಿ ಆಗಿರುತ್ತದೆ. ನನಗೆ 6 ವರ್ಷದ ಗಂಡು ಮಗು ಇದೆ ಎಂದರೆ ಸರಿ. ನನ್ನ ಗಂಡನ ಮನೆ ದೂಳೆ ಗ್ರಾಮ, ಮಹಾರಾಷ್ಟ್ರ ರಾಜ್ಯ ಇರುತ್ತದೆ.

ನನ್ನ ಗಂಡನ ವಿರುದ್ಧ ನಾನು ಮಹಾರಾಷ್ಟ್ರ ಜಿಲ್ಲೆಯ ನ್ಯಾಯಾಲಯದಲ್ಲಿ ಜೀವನಾಂಶ ಕೇಸ್ ಹಾಕಿದ್ದೆ ಎಂದರೆ ಸರಿಯಲ್ಲ. 3ನೇ ಪ್ರತಿವಾದಿಯನ್ನು ಕಮಲಾಪುರ ತಾಲೂಕಾ, ಯಳವಂತಿಗಿ ಗ್ರಾಮಕ್ಕೆ ಮದುವೆ ಮಾಡಿಕೊಡಲಾಗಿದೆ, ಅವಳಿಗೂ ಕೂಡಾ 2 ಮಕ್ಕಳು ಇವೆ ಎಂದರೆ ಸರಿ. 3ನೇ ಪ್ರತಿವಾದಿ ಕೂಡಾ ತನ್ನ ವಿರುದ್ಧ ಜೀವನಾಂಶ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ, ಸಾಕ್ಷಿ ಅವರ ಮಕ್ಕಳು ಹಾಕಿರುತ್ತಾರೆ ಎಂದು ನುಡಿಯುತ್ತಾರೆ. 4ನೇ ಪ್ರತಿವಾದಿ ಮದುವೆಯನ್ನು ತಾನೇ ಮಾಡಿಕೊಂಡಿದ್ದಾನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆ-ತಾಯಿ ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತುಗಳಲ್ಲಿ ಈಗಾಗಲೇ ನಮ್ಮಗಳ ಮಧ್ಯ ವಿಭಾಗವಾಗಿದೆ ಎಂದರೆ ಸರಿಯಲ್ಲ. ನನ್ನ ತಂದೆ ಹನಮಂತರಾಯ ಇರುವ ಕಾಲಕ್ಕನೆ 1994ರಲ್ಲಿ ನಮ್ಮಗಳ ಮಧ್ಯ ವಿಭಾಗ

ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆಯೇ ಜೀವಂತ ಇರುವ ಕಾಲಕ್ಕೆ ಮುಂದೆ ನಿಂತು ಪಾಲು ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನಿಪಿ-1 ರಿಂದ 6ರ ದಾಖಲೆಗಳನ್ನು ನಾನೇ ನ್ಯಾಯಾಲಯಕ್ಕೆ ಹಾಜರುಡಿಪಸಿರುತ್ತೇನೆ. ನಿಪಿ-1ರಲ್ಲಿ ದಿಃ 17.03.1994 ರಂದು ವಾಟ್ನಿಯಾಗಿದೆ ಎಂದು ಬರೆದಿದೆ ಎಂದರೆ ಸರಿಯಲ್ಲ. ನಿಪಿ-1ರ ಪ್ರಕಾರ 4ನೇ ಪ್ರತಿವಾದಿಗೆ 1 ಎಕರೆ 33 ಗುಂಟೆ ಬರೆಯಲಾಗಿದೆ ಎಂದರೆ, ಸಾಕ್ಷಿ ಸಣ್ಣ ರೈತರ ಸೌಲಭ್ಯ ಪಡೆಯುವ ಸಲುವಾಗಿ ಹಾಗೇ ತಂದೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆ 1993-94ರಲ್ಲಿ ಮಾಡಿಕೊಟ್ಟ ವಾಟ್ನಿ ಪ್ರಕಾರ 4ನೇ ಪ್ರತಿವಾದಿ ತನ್ನ ಜಮೀನುಗಳ ಕಬ್ಜಾ ವೈವಾಟಿಯಲ್ಲಿ ಇರುತ್ತಾನೆ ಎಂದರೆ ಸರಿ. ಸಾಕ್ಷಿ ಮುಂದುವರೆದು, ನನ್ನ ತಂದೆ ತಾವು ತಿರಿಕೊಂಡ ನಂತರ ಎಲ್ಲರೂ ಸಮನಾಗಿ ತೆಗೆದುಕೊಳ್ಳಿ ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಆ ರೀತಿ ನನ್ನ ತಂದೆ ಬಾಯಿ ಮುಖಾಂತರ ಹೇಳಿರುತ್ತಾರೆ. 1ನೇ ಪ್ರತಿವಾದಿ ಕಲಬುರಗಿ ಸಹಕಾರಿ ಬ್ಯಾಂಕ್ ರೂ.40,000/- ಸಾಲ ಪಡೆದುಕೊಂಡಿರುತ್ತಾರೆ ಎಂದರೆ ಸರಿ.

ಸರ್ವೆ ನಂ.1/7ರಲ್ಲಿ ಬಾವಿ ಇದ್ದು ಅದನ್ನು ಇಬ್ಬರು ಅಂದರೆ 1 ಮತ್ತು 4ನೇ ಪ್ರತಿವಾದಿ ಉಪಯೋಗಿಸಕೊಳ್ಳಬೇಕೆಂದು ನನ್ನ ತಂದೆ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಬಂಗರಗಿ ಗ್ರಾಮದಲ್ಲಿ ಮನೆ ನಂ.46 ಇರುತ್ತದೆ. ಸದರಿ ಮನೆಯ ಚೆಕ್‌ಬಂದಿ ಪೂರ್ವಕ್ಕೆ ಸರ್ಕಾರಿ ರಸ್ತೆ, ಪಶ್ಚಿಮಕ್ಕೆ ದಾವುದ್ ಮಕನದಾರ ಮನೆ, ಉತ್ತರಕ್ಕೆ ಶರಣಪ್ಪ ಚಿಟಕೋಟೆ ಮನೆ, ದಕ್ಷಿಣಕ್ಕೆ ಸರ್ಕಾರಿ ಅಂಗನವಾಡಿ ಇರುತ್ತದೆ. ಸದರಿ ಮನೆಯಲ್ಲಿ 4ನೇ ಪ್ರತಿವಾದಿಗೂ ಹಕ್ಕು ಇದೆ ಎಂದರೆ ಸರಿಯಲ್ಲ. 4ನೇ ಪ್ರತಿವಾದಿ ಪುನೆಯಲ್ಲಿ ವಾಸಿಸುತ್ತಿದ್ದಾರೆ ಎಂದರೆ ಸರಿ. ನನ್ನ ತಂದೆ ಯೋಗಕ್ಷೇಮ ಸಲುವಾಗಿ ಪುನೆಯಿಂದ 4ನೇ ಪ್ರತಿವಾದಿ ಹೋಗಿ ಬಂದು ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಾನು ನನ್ನ ತಂದೆಯ ಯೋಗಕ್ಷೇಮ

ಸಲುವಾಗಿ ರೂ.4 ಲಕ್ಷ ಖರ್ಚು ಮಾಡಿರುತ್ತೇನೆ ಎಂದು ಸುಳ್ಳು ಹೇಳಿ ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ.

ನಾನು ಆಗಲಿ ನನ್ನ ಅಕ್ಕ-ತಂಗಿಯರು ಆಗಲಿ ಯಾರೂ ಕೂಡಾ ನನ್ನ ತಂದೆ ಸೇವೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಮತ್ತು ನಾವುಗಳು ನಮ್ಮ ತಂದೆಯಿಂದ ಆಸ್ತಿ ಬಂದ ನಂತರ ಆತನನ್ನು ನಾವು ನಿರ್ಲಕ್ಷಿಸಿರುತ್ತೇವೆ ಎಂದರೆ ಸರಿಯಲ್ಲ. ಸುಮಾರು 25 ವರ್ಷಗಳ ಹಿಂದೆ ಪಾಲು ಆಗಿದೆ ಎಂದರೆ ಸರಿಯಲ್ಲ. ನಮ್ಮ ತಂದೆ ಜೀವಂತ ಕಾಲಕ್ಕೆ ಏಕೆ ದಾವೆ ಹಾಕಿಲ್ಲ ಎಂದರೆ, ಸಾಕ್ಷಿ ತಾವು ಮರಣ ಹೊಂದಿದ ನಂತರ ನೀವು ತೆಗೆದುಕೊಳ್ಳಿ ಎಂದು ಹೇಳಿದ್ದರು ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ದಾಖಲೆ ಪಡೆಯಲು ದಿಃ 28.12.2023 ರಂದು 1ನೇ ಪ್ರತಿವಾದಿ ಅರ್ಜಿ ಕೊಟ್ಟಿರುತ್ತಾಳೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ದಾಖಲೆಗಳು ಭೋಗಸ್ ಇರುತ್ತವೆ ಎಂದರೆ ಸರಿಯಲ್ಲ. 4ನೇ ಪ್ರತಿವಾದಿ ನನ್ನ ತಾಯಿಯ ಮಲಮಗ ಇರುತ್ತಾನೆ ಎಂದು ಹಾಗೂ ಆತನಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು 3ನೇ ಪ್ರತಿವಾದಿಯರ ಸೇರಿ ಶಾಮಿಲ್ ಆಗಿ ಇಂತಹ ಒಂದು ಸುಳ್ಳು ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**